(ರೂ. ಕೋಟಿಗಳಲ್ಲಿ)

ವರ್ಷ	ನಿಗಧಿಮಾಡಲಾಗಿದ್ದ ಹಣ	ಬಿಡುಗಡೆ ಹಣ	ವೆಚ್ಚಮಾಡಿದ ಹಣ
1997-98	1683.78	995.15	1241.65
1998-99	2060.02	1415.46	1576.10
1999-2000	1944.79	141.34+	140.56 +

+ ಅಂಕಿ ಅಂಶಗಳು ಮೇ 99 ರವರೆಗೆ.

ಆ) ಮಾರ್ಕಂಡೇಯ, ತುಂಗಾ ಮೇಲ್ದಂಡೆ ಯೋಜನೆ, ಭೀಮ ಏತ ನೀರಾವರಿ, ಘಟಪ್ರಭಾ-ಹಂತ III, ಮಲಪ್ರಭಾ, ಹಿಪ್ಪರಗಿ ಮತ್ತು ಸಿಂಗಟಲೂರು ಯೋಜನೆಗಳ 1999-2000ನೇ ಸಾಲಿನ ಅನುದಾನದ ವಿವರಗಳನ್ನು ಕರ್ನಾಟಕ ನೀರಾವರಿ ನಿಗಮವು ಅಂತಿಮಗೊಳಿಸುತ್ತಿದ್ದು, ಈ ವಿವರಗಳನ್ನು ಮೇಲಿನ ಅಂಕಿಅಂಶಗಳಲ್ಲಿ ಅಳವಡಿಸಿರುವುದಿಲ್ಲ.

The details of amount provided in the budget, the amount released and the expenditure incurred in respect of major irrigation projects during the years 1997-98 to 1999-2000 are as follows:

Year	Amount provided	Amount Released	Amount incurred.
1997-98	1683.78	995.15	1241.65
1998-99	2060.02	1415.46	1576.10
1999-2000	1683.78	141.34*	140.56 *

( ) Figures are upto end of May 99.*

Details of grants for Markendeya, Upper Tunga Project Bhima lift, Ghataprabha-Stage III, Malaprabha, Hipparagi and Singatalur projects for 1999-2000 are being finalised by Karnataka Neeravari Nigam Limited and hence the same are not included in the figures indicated above.

ಸೂರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಪಡಿತರ ಚೀಟಿಗಳ ವಿತರಣೆ.

1643(2288) ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಸುರತ್ಕಲ್ ವಿಧಾನಸಭಾ ವ್ಯಾಪ್ತಿಯಲ್ಲಿ ಎಷ್ಟು ಕುಟುಂಬಗಳು ಪಡಿತರ ಚೀಟಿಗಳನ್ನು ಹೊಂದಿವೆ;

2) ಆ ಪೈಕಿ ಹಸಿರು ಕಾರ್ಡುಗಳೆಷ್ಟು ;
ಕೇಸರಿ ಕಾರ್ಡುಗಳೆಷ್ಟು ;

3) ಪಡಿತರ ಚೀಟಿಗಾಗಿ ಅರ್ಜಿಸಲ್ಲಿಸದಿರುವ ಕುಟುಂಬಗಳ ಸಂಖ್ಯೆ ಎಷ್ಟು;

4) ಇವರಿಗೆ ಯಾವಾಗ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗುವುದು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :—

1) ಸೂರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ 87, 588 ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

2) ಹಸಿರು ಕಾರ್ಡು- 3,705
ಕೇಸರಿ ಕಾರ್ಡು- 5,227

3) ಸಾಮಾನ್ಯವಾಗಿ ಪಡಿತರ ಚೀಟಿಗಳನ್ನು ಹೊಂದಿಲ್ಲದ ಜನರನ್ನು ಗುರುತಿಸುವ ಬಗ್ಗೆ ಸಮೀಕ್ಷೆಯನ್ನು ಕೈಗೊಂಡಿರುವುದಿಲ್ಲ.

4) ಪ್ರಶ್ನೆ ಉದ್ಭವಿಸುವುದಿಲ್ಲ.

ಸುರತ್ಕಲ್ ಕ್ಷೇತ್ರದ ತಣ್ಣೀರು ಬಾವಿಯ ಬಾರ್ಜ್ ಮೌಂಟೆಡ್ ಸ್ಥಾವರ.

1644(2290) ಶ್ರೀ ಕುಂಭ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸುರತ್ಕಲ್ ಕ್ಷೇತ್ರದ ತಣ್ಣೀರು ಬಾವಿಯಲ್ಲಿ ನಿರ್ಮಾಣವಾಗುತ್ತಿರುವ ಬಾರ್ಜ್ ಮೌಂಟೆಡ್ ವಿದ್ಯುತ್ ಯೋಜನೆಗೆ ಸ್ಥಳೀಯರ ವಿರೋಧ ಇದೆಯೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಆ) ಈ ಸ್ಥಾವರಕ್ಕೆ ಹೂಡಲಾದ ಬಂಡವಾಳವೆಷ್ಟು? ಇದರಲ್ಲಿ ಸರ್ಕಾರದ ಭಾಗವೆಷ್ಟು?

ಇ) ಈ ಯೋಜನೆಯಿಂದ ದೊರೆಯುವ ವಿದ್ಯುತ್‌ನ ಪ್ರಮಾಣವೆಷ್ಟು? ಕೆ.ಇ.ಬಿ.ಯು ಇದನ್ನು ಯಾವ ದರದಲ್ಲಿ ಖರೀದಿಸುವುದು ಮತ್ತು ಯಾವ ದರದಲ್ಲಿ ವಿತರಿಸಲಾಗುವುದು?

ಈ) ಯಾವ ಯಾವ ಭಾಗದಲ್ಲಿ ಉತ್ಪಾದನೆ ಮಾಡಿ ವಿದ್ಯುತ್‌ನ್ನು ಬಳಸಲಾಗುವುದು?